

ಚಿತ್ರಗಳು: ಅವಿನಾಶ್ ಪಸ್ರೀಚಾ

ಬಾಲವನದ ಗಿಡಮರಗಳ ನಡುವೆಯೇ ನಾವು ಬೆಳೆದಿದ್ದೇವೆ. ಅಪ್ಪನಿಗೆ ಪ್ರಿಯವಾದ ಆ ಜಾಗವು ಈ ನಾಡಿನ ಸಾಂಸ್ಕೃತಿಕ ಸಂಪತ್ತು. ಆದರೆ, ಅದರ ಮಹತ್ವವನ್ನು ಉಳಿಸಿಕೊಂಡು, ಕಾಪಾಡುವ ಆಸಕ್ತಿ ಹೆಚ್ಚಿನವರಿಗೆ ಇಲ್ಲ. ಬಾಲವನವನ್ನು ಒಂದು ಕ್ರೀಡಾಕೇಂದ್ರವಾಗಿ ಮಾಡಬೇಕು ಎಂಬ ಕೂಗು ಇದೆ. ಆದರೆ ಕುವೆಂಪು ಅವರ ಮನೆ 'ಕವಿಶೈಲ'ದ ಮಾದರಿಯಲ್ಲಿ, ಟ್ಯಾಗೋರರ ಮನೆಯ ಮಾದರಿಯಲ್ಲಿ ಅದನ್ನು ಪರಂಪರಾ ಕೇಂದ್ರ(heritage site) ವಾಗಿ ಸಂರಕ್ಷಿಸಬೇಕು ಎಂಬುದು ನನ್ನ ಇರಾದೆ. ವಿದೇಶದಲ್ಲಿ ಟಾಲ್‌ಸ್ಟಾಯ್, ಶೇಕ್ಸ್‌ಪಿಯರ್ ಮನೆಗಳನ್ನು ಎಷ್ಟು ಸುಂದರವಾಗಿ ಉಳಿಸಿಕೊಳ್ಳಲಾಗಿದೆ. ಅಪ್ಪ ಆಸಕ್ತಿ ವಹಿಸದೇ ಇರುವ ಕ್ಷೇತ್ರವೇ ಇಲ್ಲ. ವಿಜ್ಞಾನ, ಕಲೆ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಅವರ ಸಾಧನೆಯನ್ನು ಸರಿಗಟ್ಟುವುದು ಕಷ್ಟ. ಬಾಲವನದಲ್ಲಿರುವ ಜೈವಿಕ ವನವನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಯಿತು. ಅಲ್ಲಿ ಕಾಟೇಜ್‌ಗಳನ್ನು ನಿರ್ಮಿಸಬೇಕು ಎಂಬ ಪ್ರಸ್ತಾಪ ಬಂದಿತ್ತು. ಪ್ರವಾಸೋದ್ಯಮದ ತೆಕ್ಕೆಗೆ ಬಿದ್ದರೆ ಅದರ ಘನತೆ ಬದಿಗೆ ಸರಿದು ವಾಣಿಜ್ಯ ಉದ್ದೇಶವೇ ಪ್ರಧಾನವಾಗುತ್ತದೆ. 'ವಿಶನ್ ಕಾರಂತ ಪ್ರಾಜೆಕ್ಟ್'ನ ಆಶಯವೇ ಕಾರಂತರ ಪರಿಸರ ಪ್ರೀತಿಯನ್ನು ಪರಿಚಯಿಸುವುದಾಗಿದೆ.

◆ **ನೀವು ಒರಿಸ್ಸಾ ಸಿಲ್ಕ್ ಉಟ್ಟಿದ್ದೀರಿ...**

ಕಲಾಕ್ಷೇತ್ರದಲ್ಲಿ ನೇಕಾರರ ವಿಭಾಗವೇ ಇತ್ತು. ನಾವೆಲ್ಲ ಕೈಮಗ್ಗದ ನೇಯ್ಗೆಯ ಸೀರೆಗಳನ್ನೇ ಉಡುವುದು ವಾಡಿಕೆಯಾಗಿದೆ. ಕಾಟನ್ ಅಥವಾ ಸಿಲ್ಕ್. ಕಲಾಕ್ಷೇತ್ರ ಮತ್ತು ಒರಿಸ್ಸಾದ ನಂಟಿನಿಂದಾಗಿ ನಾನು ಪ್ಲಾಸ್ಟಿಕ್, ಸಿಂಥೆಟಿಕ್ ಬಳಕೆಯತ್ತ ಹೆಚ್ಚು ಹೋಗಲಿಲ್ಲ. ಸಾವಯವ ಬಳಕೆಯನ್ನೇ ಇಷ್ಟಪಡುವ ಸ್ವಭಾವ ರೂಢಿಯಾಯಿತು. ರುಕ್ಮಿಣಿ ದೇವಿಯವರು ಈ ವಿಚಾರಗಳ ಬಗ್ಗೆ ಶಿಸ್ತಿನಿಂದ ಇರುತ್ತಿದ್ದರು. ಕಲಾಕ್ಷೇತ್ರ ನೇಯ್ಗೆಯ ಕೇಂದ್ರವಿತ್ತು. ಕಲಾಂಕರಿ ವಿನ್ಯಾಸವನ್ನು ಪ್ರೋತ್ಸಾಹಿಸುತ್ತಿದ್ದರು. ಒರಿಸ್ಸಾದವರು ಸೌಂದರ್ಯಜ್ಞಾನಕ್ಕೆ ತುಂಬಾ ತುಂಬ ಮಹತ್ವ ಕೊಡುತ್ತಾರೆ. ತಮ್ಮ ನಾಡಿನ ಶೈಲಿಗೆ ಆದ್ಯತೆ ನೀಡುತ್ತಿದ್ದರು.

●